

## ಹಿಂದಿನ್ ಸೀಟ್ನೋರು!

ಬಸ್ಸು ಒಂದಷ್ಟು ದೂರ ಕ್ರಮಿಸಿತ್ತು. ಆಗ ನನಗೆ ಅಪರಿಚಿತ ಸಂಖ್ಯೆಯಿಂದ ಕರೆ ಬಂತು. ಕರೆ ಸ್ವೀಕರಿಸಿ 'ಯಾರು ಮಾತಾಡ್ತಾ ಇರೋದು?' ಎಂದು ಕೇಳಿದೆ.

'ಅದೇ ಮೇಡಂ, ನಿಮ್ಮ ಹಿಂದಿನ್ ಸೀಟ್ನೋರು' ಎಂಬ ಉತ್ತರ ಬಂತು.

ನಾನು ಅರ್ಧ ಎದ್ದು ನಿಂತು ನನ್ನ ಹಿಂದಿನ ಸೀಟುಗಳತ್ತ ಕಣ್ಣಾಡಿಸಿದೆ. ಪರಿಚಯದ ಮುಖ ಯಾವುದೂ ಕಾಣಲಿಲ್ಲ. ಅಲ್ಲದೆ ಯಾರೂ ಫೋನಿನಲ್ಲಿ ಮಾತಾಡುತ್ತಿರುವುದೂ ಗೋಚರಿಸಲಿಲ್ಲ. 'ಯಾರೂ ಕಾಣ್ತಾ ಇಲ್ವಲ್ಲ, ಎಲ್ಲಿದೀರಾ ನೀವು?' ಎಂದು ಕೇಳಿದೆ.

'ಕೋಣನಕುಂಟೆ, ಬೆಂಗಳೂರು' ಎನ್ನಬೇಕೇ!

ಇದೊಳ್ಳೆ ತಮಾಷೆಯಾಯ್ತಲ್ಲಾ ಎಂದುಕೊಂಡು 'ಸ್ಸಾರಿ, ಗೊತ್ತಾಗ್ತಾ ಇಲ್ವಲ್ಲಾ...' ಎಂದೆ.

'ಅಯ್ಯೋ ನಾವು ಟೂರ್ ಹೋಗಿಬಂದು ಇನ್ನೂ ಒಂದು ವಾರವೂ ಆಗಿಲ್ಲಾ, ನಿಮ್ಮ ಹಿಂದಿನ್ ಸೀಟ್ನಲ್ಲಿ ಕೂರ್ತಿದ್ದ ನಮ್ಮನ್ನ ಮರೆತುಬಿಡೋದೇ?' ಎಂದರವರು ಆಕ್ಷೇಪಣೆಯ ಧ್ವನಿಯಲ್ಲಿ.

ಆಗಿದ್ದಿಷ್ಟು: ಎಂಟು ದಿನಗಳ ಮಹಾರಾಷ್ಟ್ರ ಪ್ರವಾಸಕ್ಕೆ ಹೋಗಿ ನಾಲ್ಕು ದಿನಗಳ ಹಿಂದಷ್ಟೇ ವಾಪಸ್ ಬಂದಿದ್ದೆವು. ಪ್ರವಾಸದ ಬಸ್ಸಿನಲ್ಲಿ ನಮ್ಮ ಹಿಂದಿನ ಸೀಟಿನಲ್ಲಿ ಕುಳಿತಿರುತ್ತಿದ್ದ ಶಾಂತಾ ಬಹಳ ಆತ್ಮೀಯರಾಗಿದ್ದರು. ಈಗವರು ತಮ್ಮ ಬೇರೊಂದು ಸಂಖ್ಯೆಯಿಂದ ಕಾಲ್ ಮಾಡಿದ್ದರು, ಬಸ್ಸಿನ ಗಲಾಟೆಯಲ್ಲಿ ಅವರ ಧ್ವನಿಯನ್ನೂ ನನಗೆ ಗುರುತಿಸಲಾಗಿರಲಿಲ್ಲ. ಅದು ಇಷ್ಟೆಲ್ಲಾ ಫಜೀತಿಗೆ ಕಾರಣವಾಗಿತ್ತು

**ಬಿ.ಎಸ್. ರಾಜಲಕ್ಷ್ಮಿ**

## ಚಿರತೆ ಬರ್ತದೆ

ಕೊಡಗಿನ ಅರಣ್ಯಧಾಮಕ್ಕೆ ನಾಲ್ವರು ಕಾಲೇಜು ಹುಡುಗಿಯರು ವಿಹಾರಕ್ಕೆ ಹೋಗಿದ್ದರು. ಮುಸ್ಸಂಜೆ ಮರದಡಿ ಪಾರ್ಟಿ ಮಾಡಿ, ಮಲಗಲು ಸಿದ್ಧತೆ ಮಾಡುತ್ತಿದ್ದಾಗ ಹಳ್ಳಿಯವನೊಬ್ಬ ನಾಲ್ಕು ನಾಯಿಗಳೊಂದಿಗೆ ಅಲ್ಲಿಗೆ ಬಂದ.

ಹುಡುಗಿಯರು ಒನಕೆ ಓಬವ್ವನಂತೆ ಕೆರಳಿ, 'ಏನಯ್ಯಾ ಹುಡುಗೀರು ಇರುವ ಕಡೆ ಹೊಂಚು ಹಾಕ್ತಾ ಇದೀಯಾ? ನಾವು ಹಳ್ಳಿ ಹುಡುಗೀರಲ್ಲ, ಗೊತ್ತಾಯ್ತಾ?' ಎಂದು ಗದರಿಸಿ ಕೇಳಿದರು.

'ಹೊಂಚುಗಿಂಚು ಒಂದೂ ನನಗೆ ಗೊತ್ತಿಲ್ಲ ಅಮ್ಮಣ್ಣಿ, ಇಲ್ಲಿ ಚಿರತೆ ಹಿಡಿಯಲು ಅರಣ್ಯ ಇಲಾಖೆಯೋರು ಗೂಡು ಇಟ್ಟಿದಾರೆ. ಅದರಲ್ಲಿ



ನಾಯಿ ಕಟ್ಟಿ ಹಾಕಲು ಬಂದಿದ್ದೇನೆ' ಎಂದ ಹಳ್ಳಿಯವ. ಮಲಗಲು ಸಿದ್ಧರಾದ ಹುಡುಗಿಯರು ಕಕ್ಕಾಬಿಕ್ಕಿ!

**ಪ. ರಾಮಕೃಷ್ಣ ಶಾಸ್ತ್ರಿ**